ಓ.ಎಸ್.ನಂ.428-2014
ಡಿ.ಡಬ್ಲು-೧

ದಿ: 27.01.2025 ರಂದು ಪ್ರತಿವಾದಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ವಾದಿ ಪರವಾಗಿ ಶ್ರೀಯುತ ಕೆ.ಎಸ್ ವಕೀಲರಿಂದ

6. ಸರ್ವೆ ನಂ.3/8 ವಿಸ್ತೀರ್ಣ 2 ಎಕರೆ ಜಮೀನು ಮೂಲತ: ಎ.ಕೆ.ಮುನಿಕದಿರಿಗ ರವರ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಎ.ಕೆ.ಮುನಿಕದಿರಿಗ ರವರು ಮೃತ ಪಟ್ಟು ಸುಮಾರು 51 ವರ್ಷಗಳಾಗಿರುತ್ತದೆ. ಸದರಿ ಎ.ಕೆ.ಮುನಿಕದಿರಿಗ ರವರು ಮೃತಪಟ್ಟಿದ್ದಾರೆ ಎನ್ನುವ ಕುರಿತಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಎ.ಕೆ.ಮುನಿಕದಿರಿಗ ರವರಿಗೆ ಬಹಳಷ್ಟು ಮಕ್ಕಳು ಮತ್ತು ಮೊಮ್ಮಕ್ಕಳು ಇರುತ್ತಾರೆ ಎಂದರೆ ಸರಿ. ನಾನು ದಾವಾ ಆಸ್ತಿಯನ್ನು ವೈಯಕ್ತಿಕ ಪತ್ರ ಮತ್ತು ಪೌಹತಿ ಆಧಾರದ ಮೇರೆಗೆ ನನ್ನ ಹೆಸರಿಗೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯು ಕೇವಲ ನಿಮ್ಮ ಹೆಸರಿಗೆ ಖಾತೆ ಬದಲಾವಣೆ ಆಗಲು ಯಾವುದಾದರು ಸಕಾರಣಗಳು ಇವೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮ ಕುಟುಂಬದಲ್ಲಿ ನನ್ನನ್ನು ಹೊರತುಪಡಿಸಿ ಬೇರೆ ಯಾರು ಓದಿರದ ಮೇರೆಗೆ ಆ ರೀತಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತೇನೆ ಮತ್ತು ಸದರಿ ಸಮಯದಲ್ಲಿ ಕುಟುಂಬದ ಇತರ ಸದಸ್ಯರು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೆ ನಂ.3 ಜಮೀನು ಗೋಮಾಳ ಜಮೀನು ಎಂದರೆ ಸರಿ. ಆ ರೀತಿ ಸರ್ವೆ ನಂ.3 ಜಮೀನಿನಲ್ಲಿ ನಿಮಗೆ ಮಂಜೂರಾಗಿದೆ ಎಂದು ಹೇಳುವ ಎರಡು ಎಕರೆ ವಿಸ್ತೀರ್ಣದ ಜಮೀನಿನ ಕುರಿತು ಗುರುತಿಸುವ ಸಲುವಾಗಿ ಸರ್ವೆ ಇಲಾಖೆಗೆ ಯಾವುದಾದರು ಅರ್ಜಿ ಸಲ್ಲಿಸಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಾವು ಆ ಕುರಿತು ತಹಶೀಲ್ದಾರರ ಬಳಿ ಕೇಳಿರುತ್ತೇವೆ ಮತ್ತು ಅವರು ನಿಧಾನವಾಗಿ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಖಾತೆ ಮಾಡಿಸಿಕೊಳ್ಳುವ ಸಮಯದಲ್ಲಿ ತಹಶೀಲ್ದಾರರ ಬಳಿ ಕೇಳಿರುತ್ತೇನೆ. ನಾನು ನಿ.ಡಿ.೧ ರಲ್ಲಿ ಕಾಣಿಸಿರುವಂತೆ ಕ್ರಮ ಸಂಖ್ಯೆ ೧ ರಿಂದ 9 ಆಸ್ತಿಗಳು ಮಂಜೂರಾದ ಕುರಿತು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಮತ್ತು ಇನ್ನುಳಿದ ಜಮೀನುಗಳು ಮಂಜೂರಾದ ಕುರಿತಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿ.ಡಿ.೧ ರಲ್ಲಿನ ಸರ್ವೆ ನಂ.3/8 ಜಮೀನಿನ ಮೂಲ ಸರ್ವೆ ನಕ್ಷೆ ನನ್ನ ಬಳಿ ಇರುತ್ತದೆ. ಸದರಿ ಮೂಲ ನಕ್ಷೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರ ಇಲ್ಲ. ನಾನು ನನ್ನ ಪ್ರತಿವಾದ ಪತ್ರದಲ್ಲಿ ಕಾಣಿಸಿರುವ ಆಸ್ತಿಯ ಚಕ್ಕುಬಂದಿಗಳನ್ನು ಯಾವ ಆಧಾರದ ಮೇರೆಗೆ ಕಾಣಿಸಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಮ್ಮ ಆಸ್ತಿಯಾದ ಮೇರೆಗೆ ಕಾಣಿಸಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿ ಕಾಣಿಸಿರುವ ಆಸ್ತಿಯ ಚಕ್ಕುಬಂದಿಗಳ ಕುರಿತಾದ ದಾಖಲೆಗಳು ನನ್ನ ಬಳಿ ಇರುತ್ತದೆ. ಆ ರೀತಿ ಪ್ರತಿವಾದ ಪತ್ರದಲ್ಲಿನ ಆಸ್ತಿಯ ಚಕ್ಕುಬಂದಿಯ ಕುರಿತು ಪಹಣಿ ಪತ್ರಿಕೆ , ಸಾಗುವಳಿ ಪತ್ರ , ಆಕಾರ ಬಂದ, ಐ.ಎಲ್. ಮತ್ತು ಆರ್.ಆರ್ ದಾಖಲೆಗಳು ಇರುತ್ತವೆ. ನಾನು ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳಲ್ಲಿ ಪ್ರತಿವಾದ ಪತ್ರದಲ್ಲಿ ಕಾಣಿಸಿರುವ ಚಕ್ಕುಬಂದಿಗಳು ಇರುವುದಿಲ್ಲ ಎಂದರೆ ಸರಿಯಲ್ಲ.

7. ದಿ: 5.09.1980 ರಲ್ಲಿ ವಾದಿಯು ದಾವಾ ಆಸ್ತಿಯನ್ನು ನಿಪಿ.1 ಕ್ರಯ ಪತ್ರದಂತೆ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯು ಕ್ರಯ ಪತ್ರದಲ್ಲಿ ಕಾಣಿಸಿರುವ ಚಕ್ಕುಬಂದಿಯ ಆಸ್ತಿಯಲ್ಲಿ ಸುಮಾರು 40 ವರ್ಷಗಳಿಂದ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ದಾವಾ ಆಸ್ತಿ ಕುರಿತಾದ ದಾಖಲೆಗಳು ನನಗೆ ಗೊತ್ತಿಲ್ಲ. ನಾನು ಸೂಲಿಬೆಲೆಯಲ್ಲಿ ವಾಸವಾಗಿರುತ್ತೇನೆ ಮತ್ತು ದಾವಾ ಹಾಗೂ ಪ್ರತಿವಾದ ಪತ್ರದ ಜಮೀನು ಯನಗುಂಟೆಯಲ್ಲಿರುತ್ತದೆ ಎಂದರೆ ಸರಿ. ನಾನು ಸರ್ವೆ ನಂ.3/8 ಜಮೀನಿನ ದಾಖಲೆಗಳ ಮೇರೆಗೆ ವಾದಿಯ ಸರ್ವೆ ನಂ.3/14 ಜಮೀನಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.3/8 ಜಮೀನಿನಲ್ಲಿ ನೀಲಗಿರಿ ತೋಪು ಮತ್ತು ರಾಗಿ ಬೆಳೆ ಇರುತ್ತದೆ. ಸರ್ವೆ ನಂ.3/1 ರಿಂದ 3/7 ಜಮೀನುಗಳಲ್ಲಿ ಯಾವ ಬೆಳೆ ಇದೆ ಎಂದು ನನಗೆ

ಗೊತ್ತಿಲ್ಲ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ಜಮೀನಿನ ಸ್ವಾಧೀನದಲ್ಲಿದ್ದರೆ ಬಾಜುದಾರ ಜಮೀನಿನ ಬೆಳೆಗಳ ಕುರಿತು ತಿಳಿದಿರುತ್ತದೆ ಎಂದರೆ ಸರಿ. ಸರ್ವೆ ನಂ.3/6 ,3/7 ಮತ್ತು 3/9 ಜಮೀನುಗಳಲ್ಲಿ ಯಾವ ಬೆಳೆ ಇದೆ ಎಂದು ನನಗೆ ಗೊತ್ತಿಲ್ಲ. ವಾದಿಯ ಕುರಿತು ನನಗೆ ಗೊತ್ತಿಲ್ಲ. ವಾದಿಯು ನಾನು ದಾವಾ ಜಮೀನಿಗೆ ತೊಂದರೆ ನೀಡುತ್ತಿದ್ದೇನೆ ಎಂದು ಪೊ.ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸಾಕ್ಷಿಯು ನಾನು ನನ್ನ ಜಮೀನಿನಲ್ಲಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯು ನನ್ನ ವಿರುದ್ದ ಪೊಲೀಸ್ ಪಿರ್ಯಾದ್ದು ನೀಡಿದ್ದರು ಎಂದರೆ ಸರಿ. ದಿ: 23.09.2014 ರಂದು ನಾನು, ನನ್ನ ಕುಟುಂಬದವರು ಮತ್ತು ನನ್ನ ಸಂಬಂಧಿಗಳು ಸೇರಿಕೊಂಡು ದಾವಾ ಆಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ತೊಂದರೆ ನೀಡಿದ ಮೇರೆಗೆ ವಾದಿಯು ನಮ್ಮ ವಿರುದ್ದ ಪೊಲೀಸ್ ಪಿರ್ಯಾದನ್ನು ನೀಡಿದ್ದರು ಎಂದರೆ ಸರಿ. ನಾನು ಸರ್ವೆ ನಂ.3/8 ಜಮೀನಿನ ದಾಖಲೆಗಳಿಂದ ದಾವಾ ಆಸ್ತಿಗೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.3/8 ಮತ್ತು 3/14 ಜಮೀನುಗಳು ಬೇರೆ ಬೇರೆ ಎಂದರೆ ಸಾಕ್ಷಿಯು ನಮ್ಮ ಜಮೀನು ಸರ್ವೆ ನಂ.3/8 ಎಂದು ನುಡಿಯುತ್ತಾರೆ. ಸರ್ವೆ ನಂ.3/14 ಜಮೀನು ನಮಗೆ ಸಂಬಂಧಿಸದೇ ಇದ್ದರೂ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.